ಕಟ್ಟುವರೊ ಅವರಿಗೆ ಸೀತೆಯನ್ನು ಕೊಡಬೇಕಾಗಿಯೂ, ಅಂತಹ ವ್ಯಕ್ತಿ, ಸೀತೆಯನ್ನು ವಿವಾಹವಾಗಲು ತನಗೆ ಯಾವ ಅಭ್ಯಂತರವೂ ಇಲ್ಲವೆಂದೂ ಹೇಳಿ ಪರಶುರಾಮ ತಪಸ್ಸಿಗೆ ಹೊರಟುಹೋಗುತ್ತಾನೆ.

ಅದೇ ಪ್ರಕಾರ ಸೀತೆ ಪ್ರಾಪ್ತವಯಸ್ಕಳಾದಾಗ ಶಿವಧನುಸ್ಸನ್ನು ಎತ್ತುವ ಸ್ಪರ್ಧೆ ನಡೆಯಿತು. ಸ್ಪರ್ಧೆಯಲ್ಲಿ ಭಾಗವಹಿಸಲು ಭೂಲೋಕದ ಸಮಸ್ತ ರಾಜರೂ ಬಂದರು. ಈ ಪ್ರಸಂಗವನ್ನು ಕವಿ ಹಾಸ್ಯಮಿಶ್ರಿತ ಶೈಲಿಯಲ್ಲಿ ಚಿತ್ರಿಸಿದ್ದಾನೆ. ಧನುಸ್ಸನ್ನು ನೋಡನೋಡುತ್ತಲೇ ಅವರೆಲ್ಲರೂ ಹೆದರಿಹೋದರು! ಇನ್ನು ಎಷ್ಟೋ ರಾಜಪುತ್ರರು, ಎಲ್ಲಿ ಧನುಸ್ಸನ್ನು ಎತ್ತಲು ಹೋಗಿ ಸಾಧ್ಯವಾಗದೇ ತಮ್ಮ ಮಾನ ಹೋದೀತೆಂದು ರಾಜಸಭೆಯಿಂದ ಮೆಲ್ಲನೆ ಓಡಿಹೋಗುತ್ತಿದ್ದರು. ಅವರನ್ನು ನೋಡಿದ ಊರ ಮಕ್ಕಳು, ಚಪ್ಪಾಳೆ ತಟ್ಟುತ್ತ ಅವರನ್ನು ಗೇಲಿ ಮಾಡುತ್ತ ಅವರ ಹಿಂದೆ ಹಿಂದೆ ಹೋಗುತ್ತಿದ್ದರು. ಈ ಸ್ಪರ್ಧೆಯ ವಿಷಯ ರಾವಣನಿಗೂ ಗೊತ್ತಾಗಿ ಅವನು ಅಕಂಪನ, ಪ್ರಹಸ್ತ, ಮಾರೀಚ ಹಾಗೂ ಮಹೋದರರೊಂದಿಗೆ ಮಿಥಿಲೆಗೆ ಬಂದನು. ಜನಕನು ಅವನನ್ನು ಸ್ವಾಗತಿಸಿ ಅವನು ಬಂದ ಕಾರಣವನ್ನು ವಿಚಾರಿಸಿದ ಮೇಲೆ, ತಾನು ಸೀತೆಯನ್ನು ವರಿಸಲು ಬಂದೆನೆಂದು ಹೇಳುತ್ತಾನೆ. ಜನಕನು ಸ್ಪರ್ಧೆಯ ವಿಚಾರವೆತ್ತಿದಾಗ ರಾವಣ ತನ್ನ ಹತ್ತೂ ತಲೆಯಿಂದ ನಕ್ಕು ತನಗೆ ಯಾವ ಸ್ಪರ್ಧೆಯೂ ಲೆಕ್ಕಕ್ಕಿಲ್ಲವೆಂದೂ, ಮೊದಲು ಸೀತೆಯನ್ನು ದಾನ ಮಾಡಬೇಕೆಂದೂ, ನಂತರ ಹಿಂತಿರುಗುವಾಗ ತಾನು ಧನುಸ್ಸನ್ನು ಎತ್ತಿ ತೋರಿಸುವೆನೆಂದೂ ಹೇಳುತ್ತಾನೆ. ಆಗ ಜನಕನು ತಾನು ಪರಶುರಾಮನ ಆಜ್ಞೆಯಂತೆ, ಸ್ಪರ್ಧೆಗೆ ಕಟ್ಟುಬಿದ್ದಿರುವೆನೆಂದು ಹೇಳುತ್ತಾನೆ.

ರಾವಣನು ಅಹಂಕಾರದಿಂದ ಧನುಸ್ಸನ್ನಿಟ್ಟಿರುವ ವಿಶಾಲವಾದ ಸಭಾಂಗಣಕ್ಕೆ ಬರುತ್ತಾನೆ. ಅದನ್ನು ನೋಡುತ್ತಲೇ ಅದನ್ನು ಎತ್ತುವ ಬಗ್ಗೆ ಅವನ ಮನಸ್ಸಿನಲ್ಲಿ ಸಂಶಯವುಂಟಾಯಿತು. ಆ ಸಮಯದಲ್ಲಿ ಅವನ ಮುಖವನ್ನು ವರ್ಣಿಸುತ್ತ ಕೃತ್ತಿವಾಸ ಹೇಳುತ್ತಾನೆ, **ಅಂತರೇ ಆತಂಕ್ ಅತಿ, ಮುಖೇ ಆಸ್ಫಾಲನ್** ಎಂದು. ಅಂದರೆ, ಒಳಗೊಳಗೇ ಭಯವಿದ್ದರೂ, ಹೊರಗೆ ಆತ್ಮವಿಶ್ವಾಸದಿಂದ ತುಂಬಿರುವನಂತೆ ಅವನು ಸೋಗು ಹಾಕಿದ್ದ. ತನ್ನ ಇಪ್ಪತ್ತೂ ಕೈಗಳಿಂದ ತನ್ನೆಲ್ಲಾ ಶಕ್ತಿಯನ್ನೂ ಒಗ್ಗೂಡಿಸಿಕೊಂಡು ಧನುಸ್ಸನ್ನು ಎತ್ತಲು ಪ್ರಯತ್ನಿಸಿದ. ಅದು ಅಲುಗಾಡಲೂ ಇಲ್ಲ. ಕೈಬೆರಳನ್ನು ಮೂಗಿನ ಮೇಲಿಟ್ಟುಕೊಂಡು ಆಚೆ ಈಚೆ ನೋಡಿ ಮಾವನಾದ ಪ್ರಹಸ್ತನಿಗೆ ಹೇಳಿದ, "ಮಾವ! ಈ ಧನುಸ್ಸು ಮಿಸುಕಾಡುತ್ತಲೇ ಇಲ್ಲವಲ್ಲ!" ಎಂದು. ಪ್ರಹಸ್ತ ಉತ್ತರಿಸುತ್ತಾನೆ, "ಮಿಥಿಲೆಗೆ ಬಂದಂತೂ ಆಗಿದೆ. ಈಗ ನಮ್ಮ ಮಾನ ಹೋಗುವುದು ಬೇಡ. ನಿನ್ನೆಲ್ಲ ಶಕ್ತಿಯನ್ನೊಗ್ಗೂಡಿಸಿ ಎತ್ತಿಬಿಡು." ರಾವಣ ಕೊನೆಯ ಪ್ರಯತ್ನ ಮಾಡಿ ಸಫಲನಾಗದೆ ಒಂದು ಯುಕ್ತಿಯನ್ನು ಮಾವನ ಮುಂದಿಡುತ್ತಾನೆ, "ನಾವು ನಾಲ್ಕೂ ಜನರು ಸೇರಿ ಈ ಧನುಸ್ಸನ್ನು ಏಕೆ ಎತ್ತಿಬಿಡಬಾರದು?" ಆಗ, ಪ್ರಹಸ್ತ ಹೇಳುತ್ತಾನೆ, "ಹೇ ವೀರ ದಶಾನನನೆ! ಆಗ ಸೀತೆಯನ್ನು ವರಿಸುವವರು ಯಾರು?" ರಾವಣ ಹೇಳುತ್ತಾನೆ, "ನೀನು ಕೂಡಲೇ ರಥವನ್ನು ದ್ವಾರದಲ್ಲಿ ತಂದು ನಿಲ್ಲಿಸು." ಪ್ರಹಸ್ತ ನಗುನಗುತ್ತಲೇ ರಥವನ್ನು ಬಾಗಿಲಿನಲ್ಲಿ ತಂದು ನಿಲ್ಲಿಸಿದ. ರಾವಣ ಕೊನೆಯ ಬಾರಿ ತನ್ನೆಲ್ಲಾ ಶಕ್ತಿಯೊಂದಿಗೆ ಪ್ರಯತ್ನಿಸಿ ಸೋತು, ಆಕಾಶದತ್ತ ನೋಡಲು ತೊಡಗಿದ. ತನ್ನ ಹಿಂದೆ ಇಂದ್ರ ನಿಂತು ನೋಡುತ್ತಿರುವಂತೆ ಅವನಿಗೆ ಭಾಸವಾಯಿತು. ಬಿಲ್ಲನ್ನು ಬಿಸುಟು ತಕ್ಷಣ ಒಂದೇ ನೆಗೆತಕ್ಕೆ ರಥಕ್ಕೆ ಹಾರಿದ. ರಥ ಲಂಕೆಯತ್ತ ಧಾವಿಸಿತು. ಮಕ್ಕಳೆಲ್ಲರೂ ಕೈಚಪ್ಪಾಳೆ ತಟ್ಟುತ್ತ ತಮಾಷೆ ಮಾಡಿದರು.

### ದಶರಥನ ಮೋಸ–ವಿಶ್ವಾಮಿತ್ರನ ಕೋಪ

ಮಿಥಿಲೆಯಲ್ಲಿ ಋಷಿಗಳು ನಡೆಸುತ್ತಿದ್ದ ಯಜ್ಞಕ್ಕೆ ಮಾರೀಚಾದಿ ರಾಕ್ಷಸರ ಉಪಟಳವಿತ್ತು. ವಿಶ್ವಾಮಿತ್ರರು ರಾಮನೇ ರಾಕ್ಷಸರ ವಧೆಗೆ ತಕ್ಕ ವ್ಯಕ್ತಿಯೆಂದರಿತು ಅಯೋಧ್ಯೆಗೆ ಬರುತ್ತಾರೆ. ಅಲ್ಲಿ ದಶರಥನಿಂದ ಆತಿಥ್ಯ ಸ್ವೀಕರಿಸಿದ ಮೇಲೆ ತಮ್ಮ ಬೇಡಿಕೆಯನ್ನು ಅವನ ಮುಂದಿಡುತ್ತಾರೆ. ಆದರೆ, ರಾಮನನ್ನು ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ದಶರಥನು ಅವನನ್ನು ವಿಶ್ವಾಮಿತ್ರರೊಂದಿಗೆ ಕಳುಹಿಸಲು ಒಪ್ಪುವುದಿಲ್ಲ. ಹಲವಾರು ಕಾರಣಗಳನ್ನು ಕೊಡುತ್ತಾನೆ. ರಾಮನ ಬದಲಿಗೆ ತಾನೇ ಬರುವುದಾಗಿ ಹೇಳುತ್ತಾನೆ. ತನ್ನ ಮಹಾಸೈನ್ಯವನ್ನೇ ಅವರೊಂದಿಗೆ ಕಳುಹಿಸಿಕೊಡುತ್ತೇನೆ, ರಾಮ–ಲಕ್ಷ್ಮಣರಿನ್ನೂ ಹಸುಳೆಗಳು ಎನ್ನುತ್ತಾನೆ. ವಿಶ್ವಾಮಿತ್ರನಿಗೆ ಇವನ ಸಬೂಬುಗಳನ್ನು ಕೇಳಿ, ಕೋಪ ಬರುತ್ತದೆ. ರಾಮನನ್ನು ತನ್ನೊಂದಿಗೆ ಕಳುಹಿಸದಿದ್ದರೆ ಇಡೀ ಸೂರ್ಯವಂಶವನ್ನೇ ನಾಶ ಮಾಡುವುದಾಗಿ ಎಚ್ಚರಿಸುತ್ತಾನೆ. ಕೊನೆಗೆ ಬೇರೆ ದಾರಿಯಿಲ್ಲದೆ, ದಶರಥನು ಭರತ–ಶತ್ರುಘ್ನರನ್ನು ಕರೆದು ಮುನಿಗಳೊಂದಿಗೆ ಹೋಗಬೇಕೆಂದು ಅವರಿಗೆ ಆಜ್ಞೆ ನೀಡುತ್ತಾನೆ. ದಶರಥನ ಮೋಸವನ್ನು ಅರಿಯದೆ ವಿಶ್ವಾಮಿತ್ರನು ಅವರನ್ನೇ ರಾಮ–ಲಕ್ಷ್ಮಣರೆಂದುಕೊಂಡು ಕರೆದುಕೊಂಡು ಹೋಗುತ್ತಾನೆ.

ಮುಂದೆ ಮುಂದೆ ವಿಶ್ವಾಮಿತ್ರರು, ಅವರ ಹಿಂದೆ ಹಿಂದೆ ಭರತ–ಶತ್ರುಘ್ನರು ಹೋಗುತ್ತಿದ್ದರು. ಇಷ್ಟರಲ್ಲಿ ಸರಯೂ ನದಿಯ ತೀರಪ್ರದೇಶ ಸಮೀಪಿಸಿತು. ಆಗ ವಿಶ್ವಾಮಿತ್ರ ಅವರನ್ನು ಹೀಗೆ ಪ್ರಶ್ನಿಸುತ್ತಾನೆ: "ಹೇ ರಾಜಪುತ್ರರೆ, ಇಲ್ಲಿಂದ ಮುಂದಕ್ಕೆ ಎರಡು ದಾರಿಗಳು ಸಾಗುತ್ತವೆ – ಒಂದರಲ್ಲಿ ಸಾಗಿದರೆ ಮೂರು ದಿನಗಳಲ್ಲಿ ನಾವು ಆಶ್ರಮವನ್ನು ಸೇರಬಹುದು. ಇನ್ನೊಂದು ದಾರಿಯ ಮೂಲಕ ಹೋದರೆ ಮೂರು ಪ್ರಹರದಲ್ಲಿಯೇ ನಾವು ಸೇರಿಬಿಡಬಹುದು; ಆದರೆ, ಆ ಮಾರ್ಗದಲ್ಲಿ ತಾಟಕಿಯೆಂಬ ಭಯಂಕರ ರಾಕ್ಷಸಿಯೊಬ್ಬಳು ಇದ್ದಾಳೆ. ಅವಳು ಮುನಿಗಳನ್ನು ಅಟ್ಟಿಸಿಕೊಂಡು ಬಂದು ತಿಂದುಹಾಕುತ್ತಾಳೆ. ಹೇಳಿ, ನಾವು ಈಗ ಯಾವ ಮಾರ್ಗದಲ್ಲಿ ಹೋದರೆ ಒಳಿತು?" ಕೂಡಲೇ ಭರತ ಉತ್ತರಿಸುತ್ತಾನೆ, "ಮುನಿಗಳೇ ಕೇಳಿರಿ. ದುಷ್ಟರಿರುವ ದಾರಿಯಲ್ಲಿ ಹೋದರೆ ನಮಗೇನು ಪ್ರಯೋಜನ?" ಈ ಮಾತನ್ನು ಕೇಳಿದ ವಿಶ್ವಾಮಿತ್ರರು ಆಲೋಚಿಸತೊಡಗಿದರು, "ಒಬ್ಬ ರಾಕ್ಷಸಿಯ